ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 16 ಇಎಸ್‌ಟಿ (8)ಸಿ ವೈವೆ 2020/186

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560001.
ದಿನಾಂಕ:17.06.2020

ವಿಷಯ: ವೈದ್ಯಕೀಯ ವೆಚ್ಚ ಮರುಪಾವತಿಯ ಬಿಲ್ಲುಗಳನ್ನು ಮರುಪಾವತಿಗಾಗಿ ಸಲ್ಲಿಸುವಾಗ ಅನುಸರಿಸಬೇಕಾದ ಕ್ರಮ ಹಾಗೂ ಅನುಬಂಧದ ಬಗ್ಗೆ.

ಉಲ್ಲೇಖ:
1. ಕರ್ನಾಟಕ ಹಾಜರಾತಿ ನಿಯಮಗಳು, 1963
2. ಸರ್ಕಾರದ ಆದೇಶ ಸಂ: ಸಿಆಸುಇ/31/ಎಸ್‌ಎಂ.ಆರ್/2014, ದಿ:05.11.2014
3. ಸರ್ಕಾರದ ಆದೇಶ ಸಂ: ಸಿಆಸುಇ/48/ಸೇನಿಎಫ್/2014, ದಿ:14.03.2018
4. ಸರ್ಕಾರದ ಆದೇಶ ಸಂ: ಸಿಆಸುಇ / 48 / ಎಸ್‌ಎಂಆರ್ / 2018 (ಭಾ), ದಿ: 13.09.2019

– * * –

ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನಕ್ಕೊಳಪಟ್ಟಿರುವ ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ/ಸರ್ಕಾರಿ ಪಾಳಿಟೆಕ್ನಿಕ್‌ಗಳ/ಕಿರಿಯ ತಾಂತ್ರಿಕ ಶಾಲೆಗಳ/ಸರ್ಕಾರಿ ಗಣಿ ಶಿಕ್ಷಣ ಶಾಲೆಯ ಪ್ರಾಚಾರ್ಯರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ವೈದ್ಯಕೀಯ ವೆಚ್ಚ ಮರುಪಾವತಿ ಮಂಜೂರಾತಿಗಾಗಿ ನಿರ್ದೇಶನಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತಾವನೆಯನ್ನು ಅಪೂರ್ಣ ದಾಖಲಾತಿಗಳೊಂದಿಗೆ ಸಲ್ಲಿಸುತ್ತಿರುವುದು ಕಂಡುಬಂದಿದೆ. ಇದರಿಂದ ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ಮರುಪಾವತಿಸಲು ವಿಳಂಬವಾಗುತ್ತಿದ್ದು, ವಿಳಂಬವಾಗಿರುವ ಬಿಲ್ಲುಗಳನ್ನು ಮರುಪಾವತಿಸಲು ಅನುದಾನ ಕೊರತೆ ಇರವುದು ಕಂಡುಬಂದಿದೆ. ಆದ್ದರಿಂದ ಅಧಿಕಾರಿ/ಸಿಬ್ಬಂದಿಗಳ ವೈದ್ಯಕೀಯ ವೆಚ್ಚ ಮರುಪಾವತಿಯ ಬಿಲ್ಲುಗಳನ್ನು ಮರುಪಾವತಿಸುವ ಸಂಬಂಧ, ಈ ಪತ್ರಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ತಿಳಿಸಿರುವ ಅಂಶಗಳನ್ನು ಪರಿಶೀಲಿಸಿ ಸೂಚಿಸಲಾದ ದಾಖಲೆಗಳನ್ನು ಸಂಸ್ಥೆಯ ಪಾಚಾರ್ಯರುಗಳು ಪರಿಶೀಲಿಸಿ, ಕಡ್ಡಾಯವಾಗಿ ಅನುಬಂಧವನ್ನು ದೃಢೀಕರಿಸಿ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಈ ಮೂಲಕ ತಿಳಿಸಲಾಗಿದೆ.

ಕರಡು ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ.

ನಿರ್ದೇಶಕರು

ಇವರಿಗೆ:
1. ಪ್ರಿನ್ಸಿಪಾಲರು, ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ/ಸರ್ಕಾರಿ ಪಾಳಿಟೆಕ್ನಿಕ್‌ಗಳ/ಕಿರಿಯ ತಾಂತ್ರಿಕ ಶಾಲೆಗಳ/ಸರ್ಕಾರಿ ಗಣಿ ಶಿಕ್ಷಣ ಶಾಲೆಗಳು.
2. ಇ-ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು(ವೆಬ್‌ಸೈಟ್‌ನಲ್ಲಿ ಪ್ರಕಟಿಸಲು).

<u>ಅನುಬಂಧ</u>

ವೈದ್ಯಕೀಯ ವೆಚ್ಚ ಮರುಪಾವತಿಯ ಬಿಲ್ಲುಗಳನ್ನು ಮರುಪಾವತಿಸುವ ಸಂಬಂಧ ಕಡ್ಡಾಯವಾಗಿ ಸಲ್ಲಿಸಬೇಕಾದ ಮಾಹಿತಿ/ದಾಖಲೆಗಳು.

| ಕ್ರಮ ಸಂ: | ಒದಗಿಸಬೇಕಾದ ದಾಖಲೆ/ಮಾಹಿತಿ | ✓ |
|---|---|---|
| 1. | ನಮೂನೆ 'ಸಿ' ಮತ್ತು 'ಬಿ'ಯನ್ನು ಸಮರ್ಪಕವಾಗಿ ಭರ್ತಿ ಮಾಡುವುದು. ನಿಯಂತ್ರಣಾಧಿಕಾರಿಗಳ ರುಜು ಕಡ್ಡಾಯವಾಗಿ ಇರತಕ್ಕದ್ದು. | |
| 2. | ನಮೂನೆ 'ಬಿ' ಯಲ್ಲಿ ಆಸ್ಪತ್ರೆಯ ವೈದ್ಯಾಧಿಕಾರಿಯ ಸಹಿ, ಹೆಸರು, ಹುದ್ದೆ, ಮಾನ್ಯತೆ ಪಡೆದಿರುವ ಆಸ್ಪತ್ರೆಯ ಸೀಲು ಕಡ್ಡಾಯವಾಗಿ ಇರತಕ್ಕದ್ದು. | |
| 3. | ಒಳರೋಗಿಯಾಗಿ ಪಡೆದ ಚಿಕಿತ್ಸೆಗೆ ಬಿಡುಗಡೆ ಸಾರಾಂಶ(ಡಿಸ್ಚಾರ್ಜ್ ಸಮ್ಮರಿ) ಮತ್ತು ಹೊರರೋಗಿಯಾಗಿ ಪಡೆದ ಚಿಕಿತ್ಸೆಗೆ ಚಿಕಿತ್ಸೆಯ ವಿವರ(ಡಯಾಗ್ನೋಸ್ಟಿಕ್ ಶೀಟ್) ಸಲ್ಲಿಸಬೇಕು. | |
| 4. | ವೈದ್ಯಕೀಯ ವೆಚ್ಚ ಪ್ರಸ್ತಾವನೆಗಳಲ್ಲಿ ಚಿಕಿತ್ಸೆ ಪಡೆದಿರುವ ಆಸ್ಪತ್ರೆಯು ಸರ್ಕಾರದಿಂದ ಮಾನ್ಯತೆ ಪಡೆದಿರುವ ಅಧಿಸೂಚನೆಯ ಸಂಖ್ಯೆ ಮತ್ತು ದಿನಾಂಕವನ್ನು ತಪ್ಪದೇ ನಮೂದಿಸುವುದು. ತುರ್ತು ಸಂದರ್ಭದಲ್ಲಿ ಸರ್ಕಾರದಿಂದ ಮಾನ್ಯತೆ ಪಡೆಯದಿರುವ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿದಲ್ಲಿ ಅದಕ್ಕೆ ತುರ್ತು ಸಂದರ್ಭದ ವಿವರಣೆಯೊಂದಿಗೆ ಸಲ್ಲಿಸತಕ್ಕದು. | |
| 5. | ಪ್ರಸ್ತಾವನೆಯನ್ನು CGHS Rules & Rates ಅನ್ವಯ ಪರಿಶೀಲಿಸಿ, ನಕಲು ಪ್ರತಿಯಲ್ಲಿ ಎಷ್ಟು ಮೊತ್ತಕ್ಕೆ ಮೇಲುರುಜು ಮಾಡಬೇಕೆಂಬುದನ್ನು ನಮೂದಿಸತಕ್ಕದ್ದು, ಇಲ್ಲದಿದ್ದಲ್ಲಿ ಪ್ರಸ್ತಾವನೆಯನ್ನು ಯಥಾವತ್ತಾಗಿ ಹಿಂದಿರುಗಿಸಲಾಗುವುದು. | |
| 6. | ಪ್ರಿಸ್ಕ್ರಿಪ್ಷನ್ ನಲ್ಲಿ ನಮೂದಿಸಿರುವ ಔಷಧಿಯ ಸಂಖ್ಯೆಗೂ(quantity) ಹಾಗೂ ಖರೀದಿಸಿರುವ ಔಷಧಿಗೂ ಹೊಂದಾಣಿಕೆ ಬಗ್ಗೆ ಪರಿಶೀಲಿಸಿ, ವ್ಯತ್ಯಾಸ ಕಂಡುಬಂದಲ್ಲಿ ತಮ್ಮ ಹಂತದಲ್ಲಿಯೇ ಹಿಂಬರಹ ನೀಡಿ ಪ್ರಸ್ತಾವನೆಯನ್ನು ಹಿಂದಿರುಗಿಸುವುದು. | |
| 7. | ಕನ್ನಡಕ ಖರೀದಿಸಿದ ವೈದ್ಯಕೀಯ ವೆಚ್ಚ ಮರುಪಾವತಿಗೆ ಅರ್ಜಿಯೊಂದಿಗೆ ನಮೂನೆ-ಡಿ ಯನ್ನು ಕಡ್ಡಾಯವಾಗಿ ಸಲ್ಲಿಸುವುದು. | |
| 8. | ಕ್ಲೇಮು ಮಾಡಿರುವ ಒಟ್ಟು ಮೊತ್ತದ ಪಟ್ಟಿಯನ್ನು (ಕ್ರಮ ಸಂಖ್ಯೆ, ಬಿಲ್ಲಿನ ದಿನಾಂಕ, ಬಿಲ್ಲಿನ ಸಂಖ್ಯೆ, ಒಟ್ಟು ಮೊತ್ತ) ಕಡ್ಡಾಯವಾಗಿ ಸಲ್ಲಿಸುವುದು. | |
| 9. | ಚಿಕಿತ್ಸಾ ಅವಧಿ ಹಾಗೂ ಖಾಯಿಲೆಯ ವಿವರಗಳನ್ನೊಳಗೊಂಡ ವೈದ್ಯಾಧಿಕಾರಿಗಳ ಪ್ರಿಸ್ಕ್ರಿಪ್ಷನ್ ಅನ್ನು ಕಡ್ಡಾಯವಾಗಿ ಬಿಲ್ಲಿಗೆ ಲಗತ್ತಿಸುವುದು ಹಾಗೂ ಚಿಕಿತ್ಸೆಗೆ ಸಂಬಂಧಪಟ್ಟಂತೆ ಲ್ಯಾಬ್ ಪರೀಕ್ಷೆಗಳನ್ನು ಮಾಡಿಸಿದ್ದರೆ ಸಂಬಂಧಪಟ್ಟ ಲ್ಯಾಬ್ ರಿಪೋರ್ಟ್ಸ್ (Lab Reports)ಗಳನ್ನು ಸಲ್ಲಿಸಬೇಕು. | |
| 10. | ಕ್ಲೇಮು ಮಾಡಿರುವ ವೆಚ್ಚವನ್ನು ಬೇರೆ ಯಾವುದೇ ಮೆಡಿಕಲ್ ಇನ್ಶೂರೆನ್ಸ್ ಕಂಪನಿಗಳಲ್ಲಿ ಕ್ಲೇಮು ಮಾಡಬಾರದು ಹಾಗೂ ಈ ಬಗ್ಗೆ ದೃಢೀಕರಣವನ್ನು ಕಡ್ಡಾಯವಾಗಿ ಸಲ್ಲಿಸುವುದು. ತಮ್ಮ ಕಛೇರಿಗೆ ಪ್ರಸ್ತಾವನೆಯನ್ನು ಸಲ್ಲಿಸಿದ ಮನವಿಯ ಮೂಲ ಪ್ರತಿಯನ್ನು ಪ್ರಸ್ತಾವನೆಯೊಂದಿಗೆ ಸಲ್ಲಿಸುವುದು ಹಾಗೂ ಮನವಿಯಲ್ಲಿ ಮನವಿ ದಿನಾಂಕವನ್ನು ನಮೂದಿಸಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು. | |
| 11. | ಸರ್ಕಾರಿ ನೌಕರರ ಅವಲಂಬಿತರ(ತಂದೆ/ತಾಯಿ) ವೈದ್ಯಕೀಯ ವೆಚ್ಚ ಮರುಪಾವತಿ ಪಡೆಯಲು ಅವರ ಆದಾಯ ಪ್ರಮಾಣಪತ್ರವನ್ನು ತಹಶೀಲ್ದಾರದಿಂದ ಪಡೆದು ಸಲ್ಲಿಸಬೇಕು ಹಾಗೂ ಜೊತೆಯಲ್ಲಿ ವಾಸಿಸುತ್ತಿರುವ ಬಗ್ಗೆ ದೃಢೀಕರಣವನ್ನು ಸಲ್ಲಿಸಬೇಕು. | |

.... ಪುಟ 02ಕ್ಕೆ.

| | | |
|---|---|---|
| 12. | ಸರ್ಕಾರಿ ನೌಕರರ ಪತಿ/ಪತ್ನಿ ಇಬ್ಬರೂ ನೌಕರರಾಗಿದ್ದ ಪಕ್ಷದಲ್ಲಿ ಪತಿ/ಪತ್ನಿ ತಾವು ಕಾರ್ಯ ನಿರ್ವಹಿಸುತ್ತಿರುವ ಸರ್ಕಾರಿ/ಅರೆ ಸರ್ಕಾರಿ/ಖಾಸಗಿ ಸಂಸ್ಥೆಗಳಿಂದ ವೈದ್ಯಕೀಯ ವೆಚ್ಚ ಮರುಪಾವತಿ ಪಡೆದಿಲ್ಲವೆಂಬ ಬಗ್ಗೆ ದೃಢೀಕರಣ ಪಡೆದು ಬಿಲ್ಲಿಗೆ ಲಗತ್ತಿಸುವುದು. | |
| 13. | ನಿರಂತರ ಚಿಕಿತ್ಸೆ ಪಡೆಯವವರು ಚಿಕಿತ್ಸೆ ಪಡೆಯುತ್ತಿರುವ ದಿನಾಂಕದಿಂದ ಹಾಗೂ ಒಳರೋಗಿಯಾಗಿ ಚಿಕಿತ್ಸೆ ಪಡೆದವರು ಆರು ತಿಂಗಳೊಳ್ಗಾಗಿ ಬಿಲ್ಲುಗಳನ್ನು ಮರುಪಾವತಿಗಾಗಿ ಸಲ್ಲಿಸುವುದು. ಅವಧಿ ಮೀರಿ ಸಲ್ಲಿಸಿದ ಪ್ರಸ್ತಾವನೆಗಳನ್ನು ಪ್ರಾಚಾರ್ಯರ ಹಂತದಲ್ಲಿಯೇ ಹಿಂದಿರುಗಿಸುವುದು. | |
| 14. | ಮಾನ್ಯತೆ ಪಡೆದ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದ ಸಿ ಮತ್ತು ಡಿ ಸಮೂಹದ ನೌಕರರಿಗೆ ಆಯಾ ಸಂಸ್ಥೆಯ ಪ್ರಾಚಾರ್ಯರೇ ಮಂಜೂರಾತಿ ಪ್ರಾಧಿಕಾರಿಯಾಗಿರುವುದರಿಂದ ಪ್ರಾಚಾರ್ಯರ ಹಂತದಲ್ಲಿಯೇ ಮಂಜೂರಾತಿ ನೀಡತಕ್ಕದ್ದು. | |
| 15. | ಸಂದೇಹಾತ್ಮಕ ಬಿಲ್ಲುಗಳ ಬಗ್ಗೆ ಆಯಾ ಜಿಲ್ಲಾ ಶಸ್ತ್ರಚಿಕಿತ್ಸಕರು/ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅವರಿಗೆ ಬಿಲ್ಲು ಕಳುಹಿಸಿ ಸ್ಪಷ್ಟೀಕರಣ ಪಡೆದ ನಂತರ ಸಲ್ಲಿಸತಕ್ಕದ್ದು, ಸಂದೇಹಾತ್ಮಕ/ನಕಲಿ ಬಿಲ್ಲುಗಳನ್ನು ಸಲ್ಲಿಸಿದಲ್ಲಿ ನಿಯಮಾನುಸಾರ ಅಂತಹವರ ವಿರುದ್ಧ ಶಿಸ್ತಿನ ಕ್ರಮ ಜರುಗಿಸಲಾಗುವುದು. | |
| 16. | ಮೇಲೆ ತಿಳಿಸಿರುವ ಅಂಶಗಳ ಬಗ್ಗೆ ಪರಿಶೀಲಿಸಿದ ನಂತರ ಅರ್ಹತೆಯಿಲ್ಲದ ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ಪ್ರಾಚಾರ್ಯರ ಹಂತದಲ್ಲಿಯೇ ತಿರಸ್ಕರಿಸಬಹುದು. | |

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಿ ದೃಢೀಕರಿಸಿದೆ.

**ಪ್ರಾಚಾರ್ಯರು**